

ಗುರಿಕಾರ್ ಶ್ರೀ ಮರಿಮಲ್ಲಪ್ಪ
(1818 - 71)

## ಪ್ರವೇಶ

ಅನ್ನದಾನಂ ಪರಂ ದಾನಂ ವಿದ್ಯಾದಾನಮತಃ ಪರಮ್ ।
ಅನ್ನೇನ ಕ್ಷಣಿಕಾ ತೃಪ್ತಿಃ ಯಾವಜ್ಜೀವಂ ಚ ವಿದ್ಯಯಾ ॥

'ಅನ್ನದಾನವು ಶ್ರೇಷ್ಠವಾದ ದಾನ. ವಿದ್ಯಾದಾನವು ಅದಕ್ಕಿಂತ ಶ್ರೇಷ್ಠವಾದುದು. ಏಕೆಂದರೆ ಅನ್ನದಿಂದ ಕ್ಷಣಿಕವಾದ ತೃಪ್ತಿ ದೊರೆಯುತ್ತದೆ. ವಿದ್ಯೆಯಿಂದ ಜೀವಮಾನವಿಡೀ ತೃಪ್ತಿ ದೊರೆಯುತ್ತದೆ.'

ವಿದ್ಯಾ ದದಾತಿ ವಿನಯಂ ವಿನಯಾದ್ಯಾತಿ ಪಾತ್ರತಾಮ್ ।
ಪಾತ್ರತ್ವಾತ್ ಧನಮಾಪ್ನೋತಿ ಧನಾದ್ಧರ್ಮಂ ತತಃ ಸುಖಮ್ ॥

'ವಿದ್ಯೆಯು ವಿನಯವನ್ನು ನೀಡುತ್ತದೆ. ವಿನಯದಿಂದ ಯೋಗ್ಯತೆಯು ಲಭಿಸುತ್ತದೆ. ಯೋಗ್ಯತೆಯಿಂದ ಧನ ಪ್ರಾಪ್ತಿಯಾಗುತ್ತದೆ. ಧನದಿಂದ ಧರ್ಮವೂ, ಧರ್ಮದಿಂದ ಸುಖವೂ ದೊರೆಯುತ್ತದೆ'.

ವಿದ್ಯೆಯುಳ್ಳವನ ಮುಖವು ಮುದ್ದು ಬರುವಂತಿಕ್ಕು
ವಿದ್ಯೆಯಿಲ್ಲದವನ ಮುಖವು
ಹಾಳೂರ ಹದ್ದಿನಂತಿಕ್ಕು ಸರ್ವಜ್ಞ

ಹೀಗೆ ಎಲ್ಲ ಭಾಷೆಗಳ ಸಾಹಿತ್ಯಗಳಲ್ಲಿ ವಿದ್ಯೆಯೇ ಮಿಗಿಲು, ವಿದ್ಯಾದಾನಕ್ಕಿಂತ ಮಿಗಿಲಾದ ದಾನ ಮತ್ತೊಂದಿಲ್ಲ ಎನ್ನುವ ಅರ್ಥವನ್ನು ಅರುಹುವ ಸಾವಿರಾರು ಸುಭಾಷಿತಗಳಿವೆ. ಪ್ರಾಣಿವರ್ಗದಲ್ಲಿ ಮನುಷ್ಯನು ಶ್ರೇಷ್ಠನೆಂದು ಪ್ರತಿಪಾದಿಸಲು ವಿದ್ಯೆ, ವಿದ್ಯೆಯಿಂದ ಬರುವ ವಿವೇಕ ಮುಖ್ಯ ಕಾರಣ. ಆದ್ದರಿಂದಲೇ ವಿದ್ಯೆಯನ್ನು ಧಾರೆಯೆರೆಯುವ ಗುರುವಿಗೆ ಪರಮ ಸ್ಥಾನ.

ಗುರುರ್ಬ್ರಹ್ಮಾ ಗುರುರ್ವಿಷ್ಣುಃ ಗುರುರ್ದೇವೋ ಮಹೇಶ್ವರಃ ।
ಗುರುಃ ಸಾಕ್ಷಾತ್ ಪರಂ ಬ್ರಹ್ಮ ತಸ್ಮೈ ಶ್ರೀಗುರವೇ ನಮಃ ॥

ಹೀಗೆ ಗುರುವು ತ್ರಿಮೂರ್ತಿಗಳಾದ ಬ್ರಹ್ಮ, ವಿಷ್ಣು, ಮಹೇಶ್ವರರ ಸ್ವರೂಪವೂ, ಪರಬ್ರಹ್ಮನೂ ಆಗಿರುವನೆಂದು ಶ್ಲಾಘಿಸಲಾಗಿದೆ.

ಇಂತಹ 'ಗುರುವಿನ ಗುಲಾಮನಾಗುವ ತನಕ ದೊರೆಯದಣ್ಣ ಮುಕುತಿ' ಎಂಬುದು ಸತ್ಯ. ಆದರೆ ಭವಬಂಧನವನ್ನು ಕಳೆದೊಗೆವ, ಸರ್ವಮಂಗಳವನ್ನು ಕರುಣಿಸುವ ಗುರುವು ದೊರೆಯುವುದು ಸುಲಭ ವಲ್ಲ. ಹಿಂದೆ ಶಿಷ್ಯರು ವಿದ್ಯೆಯ ಅರ್ಥಿಗಳಾಗಿ ಯೋಗ್ಯ ಗುರುಗಳಿಗಾಗಿ ವರ್ಷಗಳವರೆಗೆ ಅಲೆದಾಡುತ್ತಾ ಪರಿತಪಿಸಿದ್ದುಂಟು. ಗುರುಕುಲ ಸ್ಥಾಪನೆಯಾದ ಬಳಿಕ ಗುರುವು ಒಂದೆಡೆ ನೆಲೆ ನಿಂತು, ವಿದ್ಯಾರ್ಥಿಗಳಿಗೆ ಜ್ಞಾನದಾಸೋಹವನ್ನು ಮಾಡುವ ಸಂಪ್ರದಾಯವು ಬೆಳೆಯಿತು. ಶಿಷ್ಯರು ವಿದ್ಯೆ ಕಲಿಯುವುದರ ಜೊತೆಗೆ ಗುರುವು ಆದೇಶಿಸುವ ಕಾರ್ಯಗಳನ್ನು ನಿರ್ವಹಿಸಬೇಕಿತ್ತು. ವಿದ್ಯಾರ್ಜನೆ ಮಾಡಿದ ಅನಂತರ ಯಥಾಶಕ್ತಿ ಗುರುದಕ್ಷಿಣೆ ಸಲ್ಲಿಸಿ ತನ್ನ ಕಾರ್ಯಕ್ಷೇತ್ರಕ್ಕೆ ವಿದ್ಯಾರ್ಥಿಯು ತೆರಳುತ್ತಿದ್ದನು.

ಇಂದು ಅಂತಹ ವಿದ್ಯಾಕೇಂದ್ರಗಳು ಕಾಲಕ್ಕೆ ತಕ್ಕ ಬದಲಾವಣೆ ಗಳೊಂದಿಗೆ ಬೆಳೆಯುತ್ತಾ ಬಂದಿವೆ. ವಿದ್ಯಾದಾನ ಮಾಡುವ ಗುರುವು ಬದುಕಿನಲ್ಲಿ ಹೇಗೆ ಮಹತ್ತರನೋ, ಹಾಗೆ ಗುರುಗಳನ್ನು ಒಂದೆಡೆ ಸೇರಿಸಿ, ವಿದ್ಯಾದಾನ ಮಾಡಿಸುವ ಹೊಣೆ ಹೊತ್ತ ಶಿಕ್ಷಣ ಸಂಸ್ಥೆಗಳೂ ಮಹತ್ತರವೇ.

ಪದನರಿದು ನುಡಿಯಲುಂ
ನುಡಿದುದನರಿಯಲುಂ

ಆರ್ಪರ್ ಆ ನಾಡವರ್ಗಳ್
ಕುರಿತೋದದೆಯುಂ ಕಾವ್ಯಪ್ರಯೋಗಪರಿಣತಮತಿಗಳ್

– ಎಂದು ಚೆಲುವ ಕನ್ನಡ ನಾಡಾದ ಕರ್ನಾಟಕವು ಕವಿರಾಜಮಾರ್ಗ ಮೊದಲಾದ ಕಾವ್ಯಗಳಲ್ಲಿ ವರ್ಣಿತವಾಗಿದೆ. ವಿದ್ಯೆಗೆ, ವಿದ್ಯಾಭ್ಯಾಸಕ್ಕೆ, ವಿದ್ವಾಂಸರಿಗೆ ವಿಪುಲ ಅವಕಾಶವಿರುವ ಈ ವಿಶಾಲ ನಾಡಿನಲ್ಲಿ ವಿದ್ಯಾದಾನವನ್ನು ಮಾಡುವ ಕೈಂಕರ್ಯವನ್ನು ಕೈಗೊಂಡ ಹಲವಾರು ಸಂಸ್ಥೆಗಳನ್ನು ಹೆಸರಿಸಬಹುದು. ಅವುಗಳಲ್ಲಿ ಪ್ರಮುಖ ಪಾಲು ವೀರಶೈವ ವಿದ್ಯಾಸಂಸ್ಥೆಗಳದ್ದು. ಸಮಾಜದಲ್ಲಿ ಸರ್ವರು ಸಮಾನತೆ ಯಿಂದ ಬಾಳಬೇಕಾದರೆ ಸಾಕ್ಷರತೆಯ ಮಟ್ಟ ಏರಬೇಕು ಎಂಬ ಸಮಷ್ಟಿ ಧ್ಯೇಯದಿಂದ ಅನ್ನದಾಸೋಹದ ಜೊತೆಗೆ ಜ್ಞಾನ ದಾಸೋಹವನ್ನು ಕೈಗೊಂಡ ಹಿರಿಮೆ ಈ ಸಂಸ್ಥೆಗಳದ್ದು. ಸಿದ್ಧಗಂಗಾ ಶ್ರೀಮಠದ ಶಿಕ್ಷಣ ಸಂಸ್ಥೆಗಳು, ಸುತ್ತೂರು ಶ್ರೀಮಠದ ಜೆಎಸ್‌ಎಸ್ ಶಿಕ್ಷಣ ಸಂಸ್ಥೆಗಳು, ಸಿರಿಗೆರೆ ತರಳಬಾಳು ಮಠದ ಶಿಕ್ಷಣ ಸಂಸ್ಥೆಗಳು, ಚಿತ್ರದುರ್ಗದ ಬೃಹನ್ಮಠದ ಶಿಕ್ಷಣ ಸಂಸ್ಥೆಗಳು, ಬೆಳಗಾವಿಯ ಕರ್ನಾಟಕ ಲಿಂಗಾಯತ ಶಿಕ್ಷಣ ಸಂಸ್ಥೆಗಳು, ಬಾಗಲಕೋಟೆಯ ಬಸವೇಶ್ವರ ವಿದ್ಯಾವರ್ಧಕ ಶಿಕ್ಷಣ ಸಂಸ್ಥೆಗಳು ಮುಂತಾದವುಗಳನ್ನು ಇಲ್ಲಿ ಹೆಸರಿಸಬಹುದು.

ಅನುಭವ ಮಂಟಪವನ್ನು ಕಟ್ಟಿ ಬೆಳೆಸುವುದರಲ್ಲಿ ಬಸವಣ್ಣ, ಚೆನ್ನಬಸವಣ್ಣ, ಅಲ್ಲಮಪ್ರಭು, ಸಿದ್ಧರಾಮ ಮೊದಲಾದ ಮಹಾಚೇತನಗಳೊಂದಿಗೆ ಸಮಾನವಾಗಿ ದುಡಿದ ಶರಣರು ಸಾವಿರ-ಸಾವಿರ ಮಂದಿ. ಅವರಲ್ಲಿ ಪ್ರತಿಯೊಬ್ಬರ ದೇಣಿಗೆಯೂ - ಅದೆಷ್ಟೇ ಅಲ್ಪವೆನಿಸಿದರೂ - ಅತ್ಯಮೂಲ್ಯವಾದುದು ಎಂಬುದನ್ನು ಸ್ಮರಿಸ ಬೇಕು. ಏಕೆಂದರೆ ಸಾಂಘಿಕ ಯಶಸ್ಸಿಗೆ ವೈಯಕ್ತಿಕ ಬೆಂಬಲವು

ಅತ್ಯಗತ್ಯವಾದುದು. ಹಾಗೆಯೇ ಮೇಲಿನ ಮುಗಿಲೆತ್ತರದ ಶಿಕ್ಷಣ ಸಂಸ್ಥೆಗಳ ಧ್ಯೇಯೋದ್ದೇಶಗಳನ್ನು ಹೊಂದಿದ್ದ ಅನೇಕ ಮಹನೀಯರು ಕರ್ನಾಟಕದ ಅನೇಕ ಭಾಗಗಳಲ್ಲಿ ವಿದ್ಯಾಸಂಸ್ಥೆಗಳನ್ನು ಸ್ಥಾಪಿಸಿದ್ದಾರೆ, ಮುನ್ನಡೆಸುತ್ತಿದ್ದಾರೆ. ಅವರು ತಮ್ಮ ತನು-ಮನ-ಧನಗಳನ್ನು ನಿಸ್ವಾರ್ಥದಿಂದ ವಿದ್ಯಾಸೇವೆಗೆ ಸಮರ್ಪಿಸಿದ್ದಾರೆ. ಅಂತಹ ಪ್ರಾತಃ ಸ್ಮರಣೀಯರಲ್ಲಿ ಮೈಸೂರಿನ ಪ್ರತಿಷ್ಠಿತ ವಿದ್ಯಾಕೇಂದ್ರವಾದ ಮರಿಮಲ್ಲಪ್ಪ ವಿದ್ಯಾಸಂಸ್ಥೆಯ ಸ್ಥಾಪಕರಾದ ಗುರಿಕಾರ್ ಮರಿಮಲ್ಲಪ್ಪನವರು ಒಬ್ಬರು. ಅವರು ಮೈಸೂರು ಅರಸರಾಗಿದ್ದ ಮುಮ್ಮಡಿ ಕೃಷ್ಣರಾಜ ಒಡೆಯರ ಸಮಕಾಲೀನರೂ, ನಿಕಟವರ್ತಿಗಳೂ ಆಗಿದ್ದವರು.

## ಮುಮ್ಮಡಿ ಕೃಷ್ಣರಾಜ ಒಡೆಯರು

ವಿಜಯನಗರ ಸಾಮ್ರಾಜ್ಯದ ಸಮಯದಲ್ಲಿ ಒಂದು ಸಣ್ಣ ಪಾಳೆಯಪಟ್ಟಾಗಿ ಕಾವೇರಿ ನದಿಯ ದಕ್ಷಿಣದ ಬಯಲುಸೀಮೆಯಲ್ಲಿ ಒಂದು ರಾಜವಂಶವು ರಾಜಕೀಯವಾಗಿ ಪ್ರಬಲವಾಯಿತು. ಅದು ಇಂದಿನ ಕರ್ನಾಟಕದ ದಕ್ಷಿಣದ ಜಿಲ್ಲೆಗಳಾದ ಮೈಸೂರು ಮತ್ತು ಚಾಮರಾಜನಗರ ಜಿಲ್ಲೆಗಳನ್ನು ಒಳಗೊಂಡಿತ್ತು. 'ಒಡೆಯರ' ಈ ಅರಸು ಮನೆತನ ಕ್ರಮೇಣ ತನ್ನ ವ್ಯಾಪ್ತಿಯನ್ನು ಹಿಗ್ಗಿಸಿತು.

ಈ ವಂಶದಲ್ಲಿ ರಾಜ ಒಡೆಯರು (ಕ್ರಿ.ಶ. 1578), ಒಂದನೇ ಕಂಠೀರವ ನರಸರಾಜ ಒಡೆಯರು (1638-62), ಚಿಕ್ಕದೇವರಾಜ ಒಡೆಯರು (1672-1704) ಪ್ರಸಿದ್ಧ ದೊರೆಗಳಾಗಿದ್ದರು. 14 ಜುಲೈ 1794 ರಲ್ಲಿ ಜನಿಸಿದ ಮುಮ್ಮಡಿ ಕೃಷ್ಣರಾಜ ಒಡೆಯರು ಆ ಪರಂಪರೆಯನ್ನು ಮುಂದುವರೆಸಿದರು.

ಮುಮ್ಮಡಿ ಕೃಷ್ಣರಾಜ ಒಡೆಯರು ಗದ್ದುಗೆಗೇರಿದ್ದ ತಮ್ಮ ಅವಧಿಯಲ್ಲಿ (1831-1868) ಎಲ್ಲ ಮಿತಿಗಳನ್ನು ಮೀರಿ ಪ್ರಶಂಸನೀಯ ಕಾರ್ಯಗಳನ್ನು ನೆರವೇರಿಸಿದರು. ಧರ್ಮಭೀರುಗಳೂ ಮಹಾದಾನಿಗಳೂ ಆಗಿದ್ದ ಅವರು 1839ರಲ್ಲಿ ಮೈಸೂರಿನಲ್ಲಿ ಪ್ರಸನ್ನ ಕೃಷ್ಣಸ್ವಾಮಿ ದೇವಾಲಯವನ್ನು ಕಟ್ಟಿಸಿದರು. ಅನೇಕ ಗುಡಿ-ಗೋಪುರಗಳನ್ನು ನಿರ್ಮಿಸಿದರು, ಜೀರ್ಣೋದ್ಧಾರವನ್ನು ಕೈಗೊಂಡರು. ಅವುಗಳ ನಿರ್ವಹಣೆಗಾಗಿ ದಾನ-ದತ್ತಿಗಳನ್ನು ದಯಪಾಲಿಸಿದರು. ಆಗ ಶೃಂಗೇರಿಯ ಮಠ ಮತ್ತು ಶಿವಗಂಗೆಯ ದೇಗುಲಗಳಿಗೆ ಅಗ್ರ ತಾಂಬೂಲ ನೀಡುವ ವ್ಯವಸ್ಥೆಯಾಯಿತು.

ಅವರ ಅವಧಿಯಲ್ಲಿ ಅರಮನೆಯ ಸುತ್ತ ಅಂಬಾವಿಲಾಸ, ಆತ್ಮವಿಲಾಸ, ಕೃಷ್ಣವಿಲಾಸ, ಚಂದ್ರವಿಲಾಸ ಮತ್ತು ಮನೋವಿಲಾಸ ಅರಮನೆಗಳ ಹಾಗೂ ಒಳಪ್ರಾಂಗಣದಲ್ಲಿ ಸಮ್ಮುಖದ ತೊಟ್ಟಿ ಮತ್ತು ನವತೀರ್ಥ ತೊಟ್ಟಿಗಳ ನಿರ್ಮಾಣವಾಯಿತು. ಅವರು ಕಟ್ಟಿಸಿದ ಜಗನ್ಮೋಹನ ಅರಮನೆಯು ಅವರ ಕಲಾರಾಧನೆಗೆ ಸಾಕ್ಷಿಯಾಗಿದೆ.

ಮುಮ್ಮಡಿ ಕೃಷ್ಣರಾಜ ಒಡೆಯರ ಕಾಲವು ಸಾಹಿತ್ಯ, ಕಲೆ, ಸಂಸ್ಕೃತಿಗಳ ಆರಾಧನಾ ಕಾಲ. ಸಹೃದಯ ಕಲಾಪೋಷಕರಾದ ಅವರು ಸಕಲ ಲಲಿತಕಲೆಗಳಿಗೆ ನಿರಂತರ ಪ್ರೋತ್ಸಾಹ ನೀಡಿದರು. ಅವರ ಆಸ್ಥಾನದಲ್ಲಿ ವಿದ್ವನ್ಮಣಿಗಳಿಗೆ, ಕವಿಭೂಷಣರಿಗೆ, ಕಲಾಪರಿಣತರಿಗೆ ವಿಶೇಷ ಮಾನ್ಯತೆ ಇತ್ತು.

ಆಗ ಅನೇಕ ಕವಿಗಳು ರಾಜಾಶ್ರಯ ಪಡೆದು ಹಾಗೂ ಸ್ವತಂತ್ರವಾಗಿದ್ದುಕೊಂಡು ಕಾವ್ಯಗಳನ್ನು ರಚಿಸಿದರು. ಅವರಲ್ಲಿ ಬಸವಪ್ಪಶಾಸ್ತ್ರಿ, ದೇವಲಾಪುರದ ನಂಜುಂಡ, ಅಳಿಯ ಲಿಂಗರಾಜ,

ಬಾಲಲೀಲಾ ಮಹಾಂತ ಶಿವಯೋಗಿ, ಶಾಂತರಾಜಪಂಡಿತ, ದೇವಣಾಪುರದ ವೆಂಕಟರಾಮಶಾಸ್ತ್ರಿ ಮತ್ತು ಸೋಬಾನೆ ರಂಗದಾಸ ಪ್ರಮುಖರು. ಆದ್ದರಿಂದಲೇ ಒಡೆಯರಿಗೆ 'ಅಭಿನವ ಭೋಜ' ಎಂಬ ಬಿರುದು ಸಂದಿತ್ತು.

ಒಡೆಯರು ಸ್ವತಃ ಪಂಡಿತವರೇಣ್ಯರೂ, ಕವಿಗಳೂ ಆಗಿದ್ದು ಐವತ್ತಕ್ಕೂ ಹೆಚ್ಚು ಕೃತಿಗಳನ್ನು ರಚನೆ ಮಾಡಿದರು. ಅವುಗಳಲ್ಲಿ ಅಖಂಡ ಕಾವೇರಿ ಮಹಾತ್ಮೆ, ಅಧ್ಯಾತ್ಮ ರಾಮಾಯಣ, ಉತ್ತರಗೀತೆ, ಉಷಾಪರಿಣಯ, ಕೃಷ್ಣಕಥಾರತ್ನಾಕರ, ಗಯಚರಿತ್ರೆ, ಜಾತಕ ಸಾಮ್ರಾಜ್ಯ ಟೀಕೆ, ದಶಕುಮಾರ ಕಥಾಕಲಾನಿಧಿ, ನಂಜುಂಡ ಶತಕ, ಭಕ್ತಿವಿಲಾಸದರ್ಪಣ, ಲಲಿತೋಪಾಖ್ಯಾನ, ಹರಿಶ್ಚಂದ್ರೋಪಾಖ್ಯಾನ, ಶ್ರೀತತ್ತ್ವನಿಧಿಗಳು ಸೇರಿವೆ.

ಕನ್ನಡ ಮತ್ತು ಸಂಸ್ಕೃತ ಸಾಹಿತ್ಯಗಳನ್ನು ಸಮಾನವಾಗಿ ಪೋಷಿಸುತ್ತಿದ್ದ ಮುಮ್ಮಡಿ ಕೃಷ್ಣರಾಜ ಒಡೆಯರು ಮುಂದಿನ ಪೀಳಿಗೆಗೆ ವಿದ್ಯಾಭ್ಯಾಸವನ್ನು ನೀಡುವ ಕಡೆ ವಿಶೇಷ ಗಮನ ಹರಿಸಿದ್ದರು.


## ಮರಿಮಲ್ಲಪ್ಪನವರು

ಒಬ್ಬ ವ್ಯಕ್ತಿಯ ಬೆಳವಣಿಗೆಗೆ ಅವನ ತಂದೆ-ತಾಯಿಯರ ಕೊಡುಗೆಯ ಜೊತೆಗೆ ಸುತ್ತಲಿನ ಪರಿಸರವೂ ಪ್ರಭಾವ ಬೀರುತ್ತದೆ. ಆ ನಿಟ್ಟಿನಿಂದ ಮರಿಮಲ್ಲಪ್ಪನವರ ತಂದೆ - ತಾಯಿಯರ ಜೀವನ ಚರಿತ್ರೆಯತ್ತ ಗಮನ ಹರಿಸಬೇಕಾಗುತ್ತದೆ. ತುಮಕೂರು ಜಿಲ್ಲೆಯ ಚಿಕ್ಕನಾಯಕನಹಳ್ಳಿಯಿಂದ ಮೂರು ಮೈಲಿ ದೂರವಿರುವ ಸಣ್ಣ ಗ್ರಾಮ, ದಬ್ಬೆಗಟ್ಟ. ಇದನ್ನು ದಬ್ಬೆಘಟ್ಟ, ದೆಬ್ಬೆಘಟ್ಟ ಎಂದೂ ಕರೆಯುತ್ತಾರೆ. ಬಿದಿರು, ಅಡಕೆ ಇತ್ಯಾದಿ ಮರಗಳ ಕಾಂಡದ ಸೀಳಿಗೆ

ದಬ್ಬೆ ಎನ್ನುತ್ತಾರೆ. ಅದನ್ನು ಮನೆಯ ಮೇಲ್ಛಾವಣಿಗೆ, ಬೇಸಾಯದ ಸಲಕರಣೆಗೆ ಬಳಸುತ್ತಾರೆ. ದಬ್ಬೆಗಟ್ಟದಲ್ಲಿ ಅಂತಹ ಮರಗಳು ವಿಪುಲವಾಗಿದ್ದರಿಂದ, ಅವುಗಳನ್ನು ಸೀಳಿ ಉಪಯೋಗಿಸುತ್ತಿದ್ದುದು ಹೆಚ್ಚಿನ ಪ್ರಮಾಣದಲ್ಲಿತ್ತು. ಆದ್ದರಿಂದ 'ದಬ್ಬೆಗಟ್ಟ' ಎಂಬ ಹೆಸರು ಬಂದಿದೆ.

ದಬ್ಬೆಗಟ್ಟಗಳು ಕರ್ನಾಟಕದುದ್ದಕ್ಕೂ ಚಿಕ್ಕನಾಯಕನಹಳ್ಳಿ, ತುರುವೇಕೆರೆ, ಮಧುಗಿರಿ, ಮಾಗಡಿ, ಹೊಸಕೋಟೆ, ಮಂಡ್ಯ, ಶಿಕಾರಿಪುರ, ಬೇಲೂರು, ಸಕಲೇಶಪುರ, ಎಲ್ಲಾಪುರ, ಹೊನ್ನಾವರ, ಲಿಂಗಸೂಗೂರುಗಳಲ್ಲಿವೆ. ಆದರೆ ಚಿಕ್ಕನಾಯಕನಹಳ್ಳಿಯ ದಬ್ಬೆಗಟ್ಟಕ್ಕೆ ಚಾರಿತ್ರಿಕ ಮಹತ್ವ ದೊರೆತಿದೆ. ಕಾರಣ, ಅಲ್ಲಿ ಹುಟ್ಟಿದ ಸಸಿಯೊಂದು ಚಿಗುರೊಡೆದು, ಮುಗಿಲೆತ್ತರದ ಮರವಾಗಿ ಬೆಳೆದು ಲಕ್ಷಾಂತರ ಮಂದಿಗಳ ಮನೆಗಳಿಗೆ ಮೇಲ್ಛಾವಣಿಯಾಗಿ, ಅಂದಿಗೂ, ಇಂದಿಗೂ ರಕ್ಷಣೆ ನೀಡಿದೆ, ಮುಂದೆಯೂ ನೀಡಲಿದೆ. ಆ ಸಸಿಯೇ ಮರಿಮಲ್ಲಪ್ಪ. ಅದಕ್ಕೆ ಬಾಲ್ಯದಲ್ಲಿ ಪೋಷಣೆ ನೀಡಿ, ಬೆಳೆಯುವ ಎಲ್ಲ ಪೋಷಕಾಂಶಗಳನ್ನು ನೀಡಿದ ಪುಣ್ಯಪ್ರದರು ಆತನ ತಂದೆ, ತಾಯಿಯರಾದ ಮಲ್ಲಪ್ಪ ಮತ್ತು ಹೊನ್ನಮ್ಮ.

ಚಿಕ್ಕನಾಯಕನಹಳ್ಳಿಯ ಸಮೀಪದ ದಬ್ಬೆಗಟ್ಟದಲ್ಲಿ ನೆಲೆಸಿದ್ದ ರೈತಕುಟುಂಬದ ದೃಢಕಾಯ ಮಲ್ಲಪ್ಪನು ಸುಸಂಸ್ಕೃತ ಹಾಗೂ ಧರ್ಮನಿಷ್ಠನಾದ ಸರಳ ಸಜ್ಜನ. ಪತಿಗೆ ಎಲ್ಲ ರೀತಿಯಲ್ಲಿಯೂ ತಕ್ಕ ಸಹಧರ್ಮಿಣಿಯಾದವಳು ಹೊನ್ನಮ್ಮ. ಇಬ್ಬರೂ ಕಾಯಕವನ್ನು ಹೊರತುಪಡಿಸಿದರೆ, ಗುರು-ಲಿಂಗ-ಜಂಗಮರ ಆರಾಧನೆಯಲ್ಲಿ ಸದಾ ತಲ್ಲೀನರು. ನಡೆ-ನುಡಿಗಳಲ್ಲೊಂದಾದ ಅವರು ಶರಣರ ನಡತೆಯನ್ನು ಅನುಸರಿಸಿ, ಆನಂದದಿಂದ ಬಾಳ್ವೆ ನಡೆಸುತ್ತಿದ್ದರು.




**ಗೋಡೆಕೆರೆ ಕ್ಷೇತ್ರದ ಶ್ರೀ ಗಂಗಾಮಾತಾ ದೇವಾಲಯ**

ಚಿಕ್ಕನಾಯಕನಹಳ್ಳಿ ತಾಲ್ಲೂಕಿನಲ್ಲಿಯೇ ದಬ್ಬೆಗಟ್ಟದ ಬಳಿಯಲ್ಲಿ ಗೋಡೆಕೆರೆ ಎಂಬ ಸುಕ್ಷೇತ್ರವಿದೆ. ಅಲ್ಲಿ ಸೊನ್ನಲಿಗೆ ಶ್ರೀ ಸಿದ್ಧರಾಮೇಶ್ವರ ಗದ್ದುಗೆ, ಮುದಿಮಲ್ಲಿಕಾರ್ಜುನಸ್ವಾಮಿ ಹಾಗೂ ವೀರಭದ್ರೇಶ್ವರ ಮತ್ತು ಗಂಗಾಮಾತೆಯರ ಗುಡಿಗಳಿವೆ. ಶ್ರೀಮತ್ ಭೂಸುಕ್ಷೇತ್ರ ದಕ್ಷಿಣ ಸೊನ್ನಲಿಗೆಯಾದ ಗೋಡೆಕೆರೆಯಲ್ಲಿ ಗುರುಸಿದ್ಧರಾಮೇಶ್ವರಸ್ವಾಮಿ ದೇವಾಲಯದ ಸ್ಥಾನಾಧಿಪತಿಗಳಾಗಿ ರೇವಣಸಿದ್ಧ ಪರಂಪರೆಯ ವೀರಸಿಂಹಾಸನ ಸಂಸ್ಥಾನಾಧೀಶ್ವರರು 3-4 ತಲೆಮಾರುಗಳ ಹಿಂದೆಯೇ ಬಂದು ನೆಲೆಸಿದ್ದರು. ಆ

ಪರಂಪರೆಯ ಫಲಾಹಾರದ ಸ್ವಾಮಿಯವರು ಲೋಕೋದ್ಧಾರದ ಅನೇಕ ಕಾರ್ಯಗಳನ್ನು ಮಾಡುವುದರಲ್ಲಿ ಸಮರ್ಥರಾಗಿದ್ದರು. ಹಿಂದಣ ಮಠಾಧಿಪತಿಗಳಿಗಿಂತ ಹೆಚ್ಚು ಕಾರ್ಯಪ್ರವೃತ್ತರಾದ ಅವರು 'ಗೋಡೆಕೆರೆಯಲ್ಲಿ ವೃಕ್ಷಸಂಪತ್ತು ಬೆಳೆಯಬೇಕು, ಸಿದ್ಧಸಾಧನೆಗೆ ಯೋಗ್ಯವಾದ ಸ್ನಿಗ್ಧ, ಪ್ರಶಾಂತ ವಾತಾವರಣದ ನಿರ್ಮಾಣವಾಗಬೇಕು, ಪರಿಸರ ಸಂರಕ್ಷಣೆಯ ಸತ್ಕಾರ್ಯವಾಗಬೇಕು, ಎಲ್ಲಕ್ಕಿಂತ ಮಿಗಿಲಾಗಿ ಗೋಡೆಕೆರೆಯು ಶರಣರ ನೆಲೆವೀಡಾಗಬೇಕು' ಎಂದು ಆಲೋಚಿಸಿ ಹಲವು ಯೋಜನೆಗಳನ್ನು ಹಮ್ಮಿಕೊಂಡರು. ಅವರ ಪರಮಭಕ್ತ ಮಲ್ಲಯ್ಯ. ಅವನು ಆಗಿಂದಾಗ್ಗೆ ಶ್ರೀಮಠದ ಸಂದರ್ಶನ, ಸೇವೆಯನ್ನು ಶಿರಸಾವಹಿಸಿ ಮಾಡುತ್ತಿದ್ದನು.

ಸ್ವಾಮಿಗಳ ಅಭೀಪ್ಸೆಯಂತೆ ಶ್ರೀಕ್ಷೇತ್ರದ ಸುಮಾರು ಅರವತ್ತೆರಡು ಎಕರೆ ಭೂಪ್ರದೇಶದಲ್ಲಿ ಸಾವಿರಾರು ಸಸಿಗಳನ್ನು ನೆಟ್ಟು, ಬೆಳೆಸುವ ಹೊಣೆಗಾರಿಕೆಯನ್ನು ಮಲ್ಲಯ್ಯ ಅನೇಕ ಭಕ್ತರೊಂದಿಗೆ ಹೆಗಲಿಗೇರಿಸಿ ಕೊಂಡಿದ್ದನು. ಪರೋಕ್ಷವಾಗಿ ಪರಿಸರ ಸಂರಕ್ಷಣೆಯ ಮಹಾದೀಕ್ಷೆಯನ್ನು ಕೈಗೊಂಡಿದ್ದನು. ನಾಲ್ಕಾರು ವರ್ಷಗಳು ಉರುಳಿಹೋಗಿ ಸಸಿಗಳು ಬೆಳೆದು ಕಣ್ಣಿಗೆ ಹಬ್ಬವನ್ನು ಉಂಟುಮಾಡುತ್ತಿದ್ದವು.

ಕಾರ್ತಿಕ ಮಾಸದಲ್ಲಿ ಸಿದ್ಧರಾಮನ ದೊಡ್ಡ ಜಾತ್ರೆಯೊಂದಿಗೆ ಲಕ್ಷದೀಪೋತ್ಸವದ ಆರಾಧನೆಯು ನಡೆಯಲಿತ್ತು. ಗೋಡೆಕೆರೆಯಲ್ಲಿ ಗುರುಗಳು ನೆಲೆನಿಂತ ಮೇಲೆ ಜಾತ್ರೆಯ ವ್ಯಾಪ್ತಿ ವಿಶಾಲವಾಗಿ, ಅದು ವೈಭವೋಪೇತವಾಗಿ ನಡೆಯುತ್ತಿತ್ತು. ಪ್ರತಿ ಹನ್ನೆರಡು ವರ್ಷಗಳಿಗೆ ದೊಡ್ಡ ಜಾತ್ರೆಯನ್ನು ಆಚರಿಸುತ್ತಿದ್ದರು.

ಮಲ್ಲಪ್ಪನ ಪತ್ನಿ ಹೊನ್ನಮ್ಮ ಗರ್ಭಿಣಿಯಾಗಿದ್ದಳು. ಆದ್ದರಿಂದ ಫಲಾಹಾರ ಸ್ವಾಮಿಗಳ ಆಶೀರ್ವಾದ ಪಡೆದು, ಶ್ರೀ ಸಿದ್ಧರಾಮೇಶ್ವರನ